ವಿಜಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ

2832 - ಶ್ರೀ ಬಸನಗೌಡ ಪಾಟೀಲ (ವಿಜಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ತಾಲ್ಲೂಕಿನಲ್ಲಿ ವಿದ್ಯುತಿನ ತೀವ್ರ ಅಭಾವ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಬಿಜಾಪುರ ವಿಶೇಷವಾಗಿ ಬಸಾಪೂರ ಕವಲಗಿ, ಹೊನ್ನುಟಗಿ, ಶಿವಣಗಿ, ತಗ್ಗೋಡ, ಕುಮಟಗಿ, ಹತಗಲಿ ಭಾಗಗಳಲ್ಲಿ ತೀವ್ರ ವಿದ್ಯುತ್ ಅಡಚಣೆಯಿಂದ ರೈತರ ಬೆಳೆಗೆ ನಷ್ಟವಾಗುತ್ತಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು.

ಈ) ಈ ಭಾಗಗಳನ್ನು ನಾಗರಾಣ ಭಾಗದಿಂದ ಬೇರ್ಪಡಿಸಿ, ವಿಜಾಪುರ ಕೈಗಾರಿಕ ವಸಾಹತು ವಿದ್ಯುತ್ ಜೋಡಣೆಗೆ ಜೋಡಿಸಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ 220:11 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವು ಫೆಬ್ರವರಿ '95ರಿಂದ ಕಾರ್ಯಾರಂಭ ಮಾಡಿದ್ದು, ಬಿಜಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾಗಿದೆ. ಈಗ ಹೆಚ್ಚಿನ ಪ್ರಮಾಣದ ಸಮಸ್ಯೆಗಳಿರುವುದಿಲ್ಲ.

ಆ) ಬಿಜಾಪುರದಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರವು ಓವರ್ ಲೋಡ್ ಆಗುವುದನ್ನು ತಡೆಗಟ್ಟಲು ಬೆಳಿಗಿನ ಮತ್ತು ಸಂಜೆಯ ವೇಳೆಗಳಲ್ಲಿ ಲೋಡ್ ಶೆಡ್ಡಿಂಗನ್ನು ನಿರ್ವಹಿಸುತ್ತಿರುವುದರಿಂದ, ಈ ಸಮಯಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿರುವುದು ಗಮನಕ್ಕೆ ಬಂದಿದೆ.

ಇ) ಹಾಲಿ ಇರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದ ಮೇಲಿನ ಲೋಡನ್ನು ಕಡಿಮೆ ಮಾಡಲು ಮತ್ತು ಬಿಜಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಮತ್ತಷ್ಟು ಸುಧಾರಣೆಗಾಗಿ, ಬಿಜಾಪುರ ಕೈಗಾರಿಕಾ ವಸಾಹತುವಿನಲ್ಲಿ ಒಂದು 110ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲಾಗುವುದು.

ಈ) ವಿಜಾಪುರ ಕೈಗಾರಿಕಾ ವಸಾಹತುವಿನ 11 ಕೆ.ವಿ. ಫೀಡರ್ ಈಗಾಗಲೇ ಓವರ್ ಲೋಡ್ ಆಗಿರುವುದರಿಂದ ಸದರೀ ಪ್ರದೇಶಗಳನ್ನು ನಾಗರಾಣಭಾಗದಿಂದ ಬೇರ್ಪಡಿಸಿ ಬಿಜಾಪುರ ಕೈಗಾರಿಕಾ ವಸಾಹತು ಫೀಡರಗೆ ಜೋಡಿಸಲು ಸಾಧ್ಯವಾಗುವುದಿಲ್ಲ.

ವಿಜಾಪುರ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳು

2131 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯಕೀಯ ಆಸ್ಪತ್ರೆಗಳ ಒಟ್ಟು ಸಂಖ್ಯೆ ಎಷ್ಟು? ಅವು ಯಾವುವು? (ವಿವರ ನೀಡುವುದು)

ಆ) 1995-96ರ ಅವಧಿಯಲ್ಲಿ ಹೊಸ ಪಶು-ವೈದ್ಯಕೀಯ ಆಸ್ಪತ್ರೆಗಳು ಎಷ್ಟು ಮಂಜೂರಾತಿಯಾಗಿವೆ; ಅವು ಯಾವುವು;

ಇ) ರಾಜ್ಯದಲ್ಲಿ ಪಶುವೈದ್ಯಕೀಯ ಪರೀಕ್ಷಕರ ತರಬೇತಿಯನ್ನು ಹೊಂದಿರುವವರ ಸಂಖ್ಯೆ ಎಷ್ಟು?

ಈ) ರಾಜ್ಯದಲ್ಲಿ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಇರುವ ಹುದ್ದೆ ಎಷ್ಟು?

ಉ) ಹಾಗಿದ್ದಲ್ಲಿ ಸದರಿ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಊ) ಪಶುವೈದ್ಯಕೀಯ ಆಸ್ಪತ್ರೆಗಳನ್ನು ಸ್ಥಾಪಿಸಲು ಸರ್ಕಾರದ ಆಲತೆಗೋಲುಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1) 199.

2) ಪಶು ಆಸ್ಪತ್ರೆ - 13

ಪಶು ಚಿಕಿತ್ಸಾಲಯ - 25

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ - 161

(ಅನುಬಂಧ - 1 ರಲ್ಲಿ ವಿವರ ಲಗತ್ತಿಸಲಾಗಿದೆ.)

ಆ) ಸದರಿ ಸಾಲಿನಲ್ಲಿ 310 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾತಿಯನ್ನು ನೀಡಿದ್ದು, ಅದರಲ್ಲಿ ಜಿಲ್ಲಾ ಪರಿಷತಗಳು ಪ್ರಾರಂಭಿಸಿದ್ದು, 242 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಹಾಗೂ 1982-83ನೇ ಸಾಲಿನಲ್ಲಿ 200 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾತಿ ನೀಡಿದ್ದರೆ, ಇದರ ಪೈಕಿ 68 ಕೇಂದ್ರಗಳು ಸೇರಿರುತ್ತದೆ.

(ವಿವರ ಅನುಬಂಧ - 2ರಲ್ಲಿ ಲಗತ್ತಿಸಿದೆ)

ಇ) 530.

ಈ) 300.

ಉ) ಸದ್ಯದಲ್ಲಿಯೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಊ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನ ಪ್ರಕಾರ ಪ್ರತಿ 5,000 ಜಾನುವಾರು ಘಟಕಗಳಿಗೊಂದರಂತೆ ಅಥವಾ 10-12 ಹಳ್ಳಿಗಳಿಗೆ ಒಂದರಂತೆ ಪಶುವೈದ್ಯಕೀಯ ಸಂಸ್ಥೆಗಳನ್ನು ಪ್ರಾರಂಭಿಸುವ ಗುರಿ ಇದೆ.

ಅನುಬಂಧ - 1

ಬಿಜಾಪುರ ಜಿಲ್ಲೆಯ ಪಶುವೈದ್ಯ ಸಂಸ್ಥೆಗಳ ವಿವರ

ಕ್ರ. ಸಂ.	ತಾಲ್ಲೂಕು	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	ಪರಾ
1	2	3	4	5	6
1)	ವಿಜಾಪುರ	ವಿಜಾಪುರ	ತಿಕೋಟಾ	ಹೊನವಾಡ	
				ಗುಣದಾಳ	
				ಕನ್ನಾಳ	
				ಹೊನುಟಗಿ	
				ಲೋಗಾಂವಿ	
				ಬಿಜ್ಜರಗಿ	
				ಮಮದಾಪುರ	
				ಕಾಖಂಡಕಿ	
				ಹೊಸಟ್ಟಿ	
				ಕಗ್ಗೋಡ	
				ಜೈನಾಪೂರ	
				ಶಿವಣಗಿ	
				ಅರಕೇರಿ	
				ತಿಡಗುಂಡಿ	
				ಅಹೇರಿ ಜಂಬರಿ	
2)	ಇಂಡಿ	ಇಂಡಿ	ಚಡಚಾಣ	ನಾದ	
			ತಾಂಬಾ	ಹೋರ್ತಿ	
			ತಡವಲಗ	ಅಥರ್ಗಾ	

1	2	3	4	5	6
				ಸಾತಲಗಾಂವ	
				ಇಂಚಗೇರಮಠ	
				ಅಗರಖೇಡ್	
				ಝಳಕಿ	
				ಮಸಳಿ	
				ಲೋಣಬಿಕೆ	
				ಹಲಸಂಗಿ	
				ಐರಸಂಗ್	
				ಭತ್ತಕುಣಿಕೆ	
				ಅಂಜಟಗಿ	
				ಹಿರೇಬೇಪ್ಪನೂರು	
				ಸಾಲೋಟಗಿ	
				ಹಿರೇಮಸಾಲಿ	
				ಜನಗಜೀವಣಗಿ	
				ನಿವರಗಿ	
				ಬಳ್ಳೊಳ್ಳಿ	
				ಧೂಳಖೇಡ್	
				ಖೇದಗಿ	
3)	ಸಿಂಧಗಿ	ಸಿಂಧಗಿ	ಕೋರವಾರ	ಮೋರಟಗಿ	
		ದೇವರಹಿಪ್ಪರಗಿ		ಕಲಕೇರಿ	
				ಗೋಲಗೇರಿ	
				ಅಲಮೇಲ	

1	2	3	4	5	6
				ಚಾಂದಕವಟಿ	
				ಬಳಗಾನೂರ	
				ದೇವರನಾವಲಗಿ	
				ಕೊಂಡಗೂಳಿ	
				ಮಲಛಾಣ	
				ಸುಂಗಠಾಣ	
				ಕಕ್ಕಳಮೇಲಿ	
				ಗುಬ್ಬಿವಾಡ	
				ದೇವಣಗಾಂವ್	
				ಗುತ್ತರಗಿ	
				ಅಸ್ಕಿ	
				ಯಂಕಂಚಿ	
				ಮುಳಸಾವಳಗಿ	
				ಕನ್ನೊಳ್ಳಿ	
4)	ಬಸವನಬಾಗೇವಾಡಿ		ಬಸವನಬಾಗೇರಾಡಿ	ಮನಗೂಳಿನಿಡಗುಂಡಿ	
			ಕೂದಗಿ	ಕೋಲ್ಲಾರ	
			ಹೂವಿನಹಿಪ್ಪರಗಿ	ಮಲಗಾಣ	
				ಉಕ್ಕಲಿ	
				ಮುಳವಾಡ	
				ಮುತ್ತಗಿ	
				ಗೊಳಸಂಗಿ	
				ನರಸಲಗಿ	

1	2	3	4	5	6
				ಬಿಡನಾಳ	
				ಸಾತಿಹಾಳ	
				ವಡವದಗಿ	
				ಯಾಳವಾರ	
				ಸಾಸನೂರ	
				ಇಂಗಳೇಶ್ವರ	
5)	ಮುದ್ದೆಬಿಹಾಳ್	ಮುದ್ದೆಬಿಹಾಳ್	ತಾಳೀಕೋಟಿ	ದೇವರಹುಲಗಬಾಳ	
			ತಂಗಡಗಿ	ಸೋಮನಾಳ	
			ನಾಲ್ವತ್ವಾದ	ಮಡಿಕೇಶ್ವರ	
				ಹಿರೀಮುರಾಳ	
				ಬಿ. ಸಾಲವಾದಗಿ	
				ತುಂಬಿಗೆ	
				ಕೊಣ್ಣೂರ	
				ಕಾಳಗಿ	
				ಬಸರಕೋಡ	
				ತಮದಡ್ಡಿ	
				ಧವಳಗಿ	
6)	ಜಮಖಂಡಿ	ಜಮಖಂಡಿ	ತೇರದಾಳ	ಬಿದರಿ	
			ಬಸಹಟ್ಟಿ	ಮೈಗೂರ	
			ಸಾವಳಗಿ	ಹಿಪ್ಪರಗಿ	
				ಚಿಮ್ಮಡ	
				ತುಂಗಳ	

1	2	3	4	5	6
				ಚಿಕ್ಕದಡಸಲಗಿ	
				ಹಳಂಗಳಿ	
				ತೊಡಲಬಾಗಿ	
				ಗೋಠೆ	
				ಶೂರಪಾಲಿ	
				ತುಬ್ಬಚ್ಚಿ	
7)	ಮುದೋಳ	ಮುಧೋಳ	ಮಹಾಲಿಂಗೂರ	ಲೋಕಾಪೂರ	
				ಹಲಗಲಿ	
				ಇಂಗಳಗಿ-ಯಡಹಳ್ಳಿ	
				ಉತ್ತೂರ	
				ತಿಮ್ಮಾಪೂರ	
				ಮಂಟೂರ	
				ಒಂಟಿಗೋಡಿ	
				ಬಂಟನೂರು	
				ಬೆಳಗಲಿ	
				ಮೆಟ್ಟಗುಡ್ಡ	
				ಕಸಬಾ ಜಂಬಗಿ	
				ವಜ್ರಮಟ್ಟಿ	
				ಮುತ್ತೂರ	
				ಮಾಚರನೂರ	

ಅನುಬಂಧ - 2

ಸರ್ಕಾರಿ ಆದೇಶದ ಸಂಖ್ಯೆ : ಎಹೆಚ್ಎಫ್ :57 : ವಿಎಹೆಚ್:93 ದಿನಾಂಕ : 18.8.95ರಂದು ಮಂಜೂರಾದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ವಿವರ (ಬಿಜಾಪುರ ಜಿಲ್ಲೆ)

ಎ) 82-83ರಂದು ಹೊಸದಾಗಿ ಪ್ರಾರಂಭಿಸಲ್ಪಟ್ಟ 200 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಪೈಕಿ ವಂಟನದ ಅಭಾವದಿಂದ ಕಾರ್ಯಾರಂಭಗೊಳ್ಳದಿರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಮಂಜೂರಾತಿ ದೊರೆತ ಸಂಸ್ಥೆಗಳು.

1) ಕಾಕನೂರು, ಬಾದಾಮಿ ತಾಲ್ಲೂಕು

2) ಹಿರೇಮಸಾಲಿ, ಇಂಡಿ ತಾಲ್ಲೂಕು

3) ಬೆಳಗಲಿ, ಮುಧೋಳ

ಬಿ) ಜಿಲ್ಲಾ ಪಂಚಾಯತನಿಂದ ಪ್ರಾರಂಭಿಸಲ್ಪಟ್ಟಿದ್ದಕ್ಕೆ ಮೇಲಿನ ಸರ್ಕಾರಿ ಆದೇಶದಂತೆ ಮಾನ್ಯತೆ ನೀಡಲಾಗಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳ ವಿವರ

ತಾಲ್ಲೂಕು	*ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ*	*ತಾಲ್ಲೂಕು*	*ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ*
1	2	3	4
ಬಾದಾಮಿ	ನೀರಬೂದಿಹಾಳ	ಜಮಖಂಡಿ	ಹಳಂಗಳಿ
	ಕಾಗಲಗೊಂಬ		ತೊಡಲಬಾಗಿ
ಭಾಗಲಕೋಟೆ	ಗದ್ದನಕೇರಿ		ಗೋತೆ
	ಬೆನ್ನೂರ		ಶೂರಪಾಲಿ
	ನಾಯಿನೇಗಲಿ		ತುಬಚಿ
	ತುಳಸೀಗೇರಿ	ಮುದ್ದೆಬಿಹಾಳ	ಕೊಣ್ಣೂರ
ಬಸವನಭಾಗೇವಾಡಿ	ಯಾಳವಾರ	ಕಾಳಗಿ	
	ಸಾಸನೂರು	ಬಸರಕೋಡ್	
	ಇಂಗಳೇಶ್ವರ	ತಮದಡ್ಡಿ	
ಬಿಜಾಪುರ	ಶಿವಣಗಿ	ಧವಳಗಿ	

1	2	3	4
	ಅರಕೇರಿ	ಮುಧೋಳ	ಮೆಟಗುಡ್ಡ
	ತಿದಗುಂಡಿ		ಕಸಬಾಜಂಬಗಿ
ಬಿಳಗಿ	ಅರಕೇರಿ	ವಜ್ರಮಟ್ಟಿ	
	ಸಿದ್ದಾಪುರ	ಮುತ್ತೂರ	
ಹುನಗುಂದ	ಹಾವರಗಿ	ಮಾಚಕನೂರ	
	ಗಂಜಿಹಾಳ	ಮಳಗಿ	
	ಹಿರೇಸಿಂಗನಗುತ್ತಿ	ಸಿಂಧಗಿ	ಗುತ್ತರಗಿ
ಇಂಡಿ	ಜಿಗಜೀವಣಗಿ		ಅಸಿಕ್ಕ
	ನೀವರಗಿ		ಯಂಕಂಚಿ
	ಬೆಳ್ಳೊಳ್ಳಿ		ಮುಳಸಾವಳಗಿ
	ಧೂಳಖೇಡ್		ಕನ್ನೊಳ್ಳಿ
	ಖೇದಗಿ		

ರಾಜ್ಯದಲ್ಲಿ ವಿದ್ಯುತ್ ಟ್ರಾನ್ಸಫಾರಂಗಳು ಸುಟ್ಟುಹೋಗಿತ್ತಿರುವುದು.

2132 - ಶ್ರೀ ಬಸನಗೌಡ ಪಾಟೀಲ (ವಿಜಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುತ್ ಟ್ರಾನ್ಸಫಾರ್ಮರಗಳು ಅತಿಯಾದ ಹೆಚ್ಚಿನ ಭಾರದಿಂದ ಸುಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನಿಗದಿತ ಶಕ್ತಿಗಿಂತ ಹೆಚ್ಚಿನ ವಿದ್ಯುತ್ ಸಂಪರ್ಕ ನೀಡುವ ಉದ್ದೇಶವೇನು;

ಇ) ವಿಜಾಪುರ ತಾಲ್ಲೂಕಿನಲ್ಲಿ ನಿಗದಿತ ಶಕ್ತಿಗಿಂತ ಟ್ರಾನ್ಸಫಾರ್ಮರಗಳಿಗೆ ಹೆಚ್ಚಿನ ಭಾರ ಹಾಕಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ವಿಜಾಪುರ ತಾಲ್ಲೂಕಿನಲ್ಲಿ ಟ್ರಾನ್ಸಫಾರ್ಮರಗಳು ಕಾರ್ಯ ನಿರತವಾಗಿರುವುದಷ್ಟು; ಅವುಗಳ ಶಕ್ತಿ ಸಾಮರ್ಥ್ಯವೆಷ್ಟು, ಅವುಗಳ ಮೇಲೆ ಹೆಚ್ಚಿನ ಭಾರ ಎಷ್ಟು ಹೇರಲಾಗಿದೆ (ವಿವರವನ್ನೊದಗಿಸುವುದು).

ಈ) ಈ ಟ್ರಾನ್ಸಫಾರ್ಮರಗಳು ಮೇಲಿಂದ ಮೇಲೆ ಸುಡುತ್ತಿರುವುದುರಿಂದ ರೈತರಿಗೆ ಆಗುವ ತೊಂದರೆಯ ಬಗ್ಗೆ ಸರ್ಕಾರದ ಪರಿಹಾರ ಕ್ರಮಗಳೇನು;